

# ‘ಓ ಟೋರಿ ಗೇಟ್’ ಎಂಬ ಸೋಜಿಗ!

ಜಪಾನಿನ ಮಿಯಾಜಿಮಾದ ಸಮುದ್ರದಲ್ಲಿರುವ ‘ಓ ಟೋರಿ ಗೇಟ್’ ಪ್ರವಾಸಿಗರ ಕಣ್ಣಿಗೆ ಹಬ್ಬ ಉಂಟು ಮಾಡುವಂತಿದೆ. ಸಮುದ್ರದ ಮಧ್ಯದಲ್ಲಿ ನಿರ್ಮಿಸಲಾಗಿರುವ ಈ ಓ ಟೋರಿ ಗೇಟ್‌ನ ಎತ್ತರ ಅಂದಾಜು 16.8 ಮೀಟರ್. ಇದು ಇಶುಕುಷಿಮಾ ದೇವಸ್ಥಾನದ ಪ್ರಸಿದ್ಧವಾದ ವಿನ್ಯಾಸ ಎನ್ನಲಾಗಿದೆ.

ಈ ರಚನೆಯು ಜಪಾನಿನ ರೈಬು ಟೋರಿ ಶೈಲಿಯಲ್ಲಿದೆ. ಇದು ಒಂದು ಮರದ ಶಿಂಟೊಗೇಟ್ ಡಿಸೈನ್. ನಾಲ್ಕು ಆಧಾರ ಸ್ಥಂಭಗಳಿಂದ ಕೂಡಿದ್ದು ಸೈಪ್ರಸ್ ಎಂಬ ಮರದ ತೊಗಟೆಯಿಂದ ಮಾಡಲಾಗಿದೆ. ನಾಲ್ಕು ಕಂಬಗಳ ಟೋರಿ ಶೈಲಿಯನ್ನು 1547ರಲ್ಲಿ ಸಮುದ್ರದಲ್ಲಿ ಅಳವಡಿಸಲಾಗಿದೆ ಎಂಬುದು ಇತಿಹಾಸಕಾರರ ಲೆಕ್ಕಾಚಾರ.

ಇದರ ಮುಖ್ಯ ಕಂಬಗಳು 13.4 ಮೀಟರ್ ಎತ್ತರ ಮತ್ತು 9.9 ಮೀಟರ್ ಸುತ್ತಳತೆ ಹೊಂದಿದೆ. ಈ ಟೋರಿಯು ಮುಖ್ಯ ಪೂಜಾ ಮಂದಿರದಿಂದ ಅಂದಾಜು 212.7 ಮೀಟರ್ ದೂರವಿದೆ.

ಶತಮಾನಗಳಿಂದ ಇಶುಕುಷಿಮಾ ದೇವಸ್ಥಾನ, ಮಿಯಾಜಿಮಾ ಚೆಲುವು ಟೋರಿ ಗೇಟ್‌ನಿಂದ ಪ್ರಸಿದ್ಧವಾಗಿದೆ. ಟೋರಿಗೇಟ್ ಅನ್ನು ನೀರಿನ ಮಧ್ಯೆ  ನಿರ್ಮಿಸಿರುವುದರಿಂದ ನೋಡುಗರಿಗೆ ಆಕರ್ಷಣೆಯ ತಾಣವೂ ಆಗಿದೆ. ಇದರ ಸೊಬಗನ್ನು ಸವಿಯಲು ಪ್ರವಾಸಿಗರ ದಂಡೇ ಇಲ್ಲಿಗೆ ಬರುತ್ತಿದೆ.

■ ಪ್ರಭಾ ಪಿ. ಶಾಸ್ತ್ರಿ

